# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಯೇಸುವಿಗೆ ಒಂದು ಘೋರವಾದ ಸಮಯ

ಬರಹಗಾರರು: Edward Hughes
ಚಿತ್ರಲೇಖಕರು: Byron Unger; Lazarus
ಅಳವಡಿಸುವವರು: M. Maillot; Sarah S.
Alastair Paterson
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಯೇಸು ದೀಕ್ಷಾಸ್ನಾನ ಹೊಂದಿದ ನಂತರ ದೇವರು ಮಾತನಾಡಿದನು ಅದೇನೆಂದರೆ "ಈತನು ಪ್ರೀಯನಾಗಿರುವ ನನ್ನ ಮಗನು, ಇತನನ್ನು ನಾನು ಮೆಚ್ಚಿದ್ದೇನೆ". ಅದೇ ರೀತಿ ಪವಿತ್ರಾತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದನು.




ಇದಾದ ನಂತರ,
ಪವಿತ್ರಾತ್ಮನು ಯೇಸುವನ್ನು
ಏಂಕಾತವಾಗಿ ಆತನನ್ನು
ಅಡವಿಗೆ ನಡಿಸಲ್ಪಟ್ಟನು.
3
ಯೇಸವು ನಾಲ್ವತ್ತು ದಿವಸದಿಂದ
ಊಪವಾಸವಿದ್ದನು, ಅಂದರೆ ಯಾವುದೇ
ಆಹಾರವನ್ನು ಸೇವಿಸಿರದ ಕಾರಣ
ಆತನಿಗೆ ತುಂಬಾ ಹಸಿವಾಯಿತು.
4
ಸತ್ಯವೇದವು ಅಲ್ಲಿ ಕಾಡು ಮೃಗಗಳು ಇದ್ದವು ಎಂದು ಹೇಳುತ್ತದೆ.
5
ಸೈತಾನನು ಯೇಸುವನ್ನು ಶೋಧಿಸಿದನು. ಬಹಳ
ಹಿಂದೆ ಆದಾಮ ಹವ್ವಳರನ್ನು ಏದೇನ್ ತೋಟದಲ್ಲಿ
ಶೋಧಿಸಿ ದೇವರಿಗೆ ಅವಿಧೇಯರಾಗುವ ಹಾಗೆ
ಮಾಡಿದ್ದನು ಈಗ ಯೇಸುವನ್ನು ಶೋಧಿಸು
(ಪರೀಕ್ಷೆ) ತ್ತಿದ್ದಾನೆ.
6
ಸೈತಾನನು ದೇವರ
ಮಗನಾದ ಯೇಸುವನ್ನು
ಸಹ ಶೋಧಿಸಿದನು.
7
“ನೀನು ದೇವರ ಮಗನಾಗಿದ್ದರೆ ಈ ಕಲ್ಲನ್ನು
ರೋಟ್ಟಿಯನ್ನಾಗಿಸು” ಎಂದು ಸೈತಾನನು
ಹೇಳಿದನು. ಅವನಿಗೆ ಗೋತ್ತಿತ್ತು ಯೇಸುವಿಗೆ
ಹಸಿವೆಯಾಗಿದೆ ಎಂತಲೂ ಆತನು ಕಲ್ಲನ್ನು
ರೊಟ್ಟಿಯಾಗಿ ಮಾಡಬಲ್ಲನೆಂದು. ಯೇಸುವು
ಸೈತಾನನ ಮಾತಿಗೆ ವಿಧೇಯನಾಗುವನಾ?
8


ಇಲ್ಲ! ಯೇಸು ಸೈತಾನನ ಮಾತಿಗೆ ವಿಧೇಯನಾಗಲಿಲ್ಲ. ಬದಲಾಗಿ ಯೇಸು ಸೈತಾನನಿಗೆ ದೇವರ ವಾಕ್ಯದಿಂದ ಉತ್ತರ ಕೊಟ್ಟನು ಅದೇನೆಂದರೆ “ಮನುಷ್ಯನು ರೋಟ್ಟಿತಿಂದ ಮಾತ್ರದಿಂದ ಬದುಕುವುದಿಲ್ಲ ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದ ಬದುಕುವನು” ಎಂದು ಬರೆದಿದೆ ಅಂದನು.
9
ಆಗ ಸೈತಾನನು ಯೇಸುವನ್ನು ಪರಿಶುದ್ದ ಪಟ್ಟಣವಾದ ಯೆರೂಸಲೇಮಿಗೆ ಕರೆದುಕೊಂಡು ಹೋದನು, ಅಲ್ಲಿ ಪವಿತ್ರ ದೇವಾಲಯ ಇದ್ದದರಿಂದ ಜನರು ದೇವರನ್ನು ಆರಾಧಿಸಲು ಬರುತ್ತಿದ್ದರು, ಇದರ ನಂತರ ಸೈತಾನನು ಏನು ಮಾಡಬಹುದು?
10
“ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ಧುಮುಕು ನಿನ್ನ ವಿಷಯವನಾಗಿ ತನ್ನ ಧೂತರಿಗೆ ಅಪ್ಪಣೆಕೊಟ್ಟು ನಿನ್ನನ್ನು ಎತ್ತಿ ಹಿಡಿಯುವನು” ಎಂದು ವಾಕ್ಯದಲ್ಲಿ ಬರೆದದೆಯಲ್ಲಾ ಎಂದು ಸೈತಾನನು ಹೇಳಿದನು.
11
ಇಲ್ಲ! ಎಂದು ಯೇಸು ಉತ್ತರ ಕೊಟ್ಟು “ನಿನ್ನ ದೇವರನ್ನು ಪರೀಕ್ಷಿಸಬಾರದು ಎಂದು ಸಹ ಬರೆದಿದೆ” ಎಂದು ಹೇಳಿದನು.
12
ಸೈತಾನನು ಮತ್ತೆ ಪ್ರಯತ್ನಿಸಿ, ಯೇಸುವನ್ನು ಪಟ್ಟಣದಿಂದ ಹೋರಕ್ಕೆ ಕರೆದುಕೊಂಡು ಎತ್ತರವಾದ ಬೆಟ್ಟಕ್ಕೆ ಕರೆದೊಯ್ದನು.
13
ಪ್ರಪಂಚದ ಎಲ್ಲಾ ರಾಜ್ಯಗಳನ್ನು ಅವುಗಳ ವೈಭವವನ್ನು ಯೇಸುವಿಗೆ ತೋರಿಸಿ ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಅವುಗಳನ್ನೆಲ್ಲಾ ನಿನಗೆ ಕೋಡುವೆನು ಎಂದು ಸೈತಾನನು ಹೇಳಿದನು.
14

“ಸೈತಾನನೆ ನೀನು ತೊಲಗಿಹೋಗು ನಿನ್ನ ದೇವರಾದ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಧಿಸಬೇಕು” ಎಂಬುದಾಗಿ ಬರೆದಿದೆ ಎಂದು ಯೇಸು ಹೇಳಿದನು.



15

ಸೈತಾನನು ಸ್ವಲ್ಪ ಸಮಯದ ತನಕ ಯೇಸುವನ್ನು ಬಿಟ್ಟು ಹೋದನು. ನಂತರ ಒಂದು ಆಶ್ಚರ್ಯಕರವಾದ ಘಟನೆ ನಡೆಯಿತು ಅದೇನೆಂದರೆ, ಸೈತಾನನಿಗೆ ವಿಧೇಯನಾಗದ ತನ್ನ ಮಗನಿಗೆ ಉಪಚಾರ ಮಾಡಲು ದೂತರನ್ನು ದೇವರು ಕಳುಹಿಸಿದನು.



16

ಯೇಸುವಿಗೆ ಒಂದು ಘೋರವಾದ ಸಮಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮತ್ತಾಯ **4**, ಲೂಕ **4**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

17

# ಮುಕ್ತಾಯ

38 60

18

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
**ಯೋಹಾನ 3:16**

19

21

22

23

24

25

26

27

28

29

30

31

32